ಸಹ ಇದನ್ನು ಸಂಬಂಧಪಟ್ಟಂತಹ ಸಚಿವರ ಜೊತೆ ಮಾತನಾಡಿ ಇನ್ನು ಮುಂದಿನ ದಿನಗಳಲ್ಲಿ ಹೆಚ್ಚು ಕ್ರಮವನ್ನು ವಹಿಸಿಕೊಳ್ಳುತ್ತೇನೆ.

ಶ್ರೀ ಎನ್.ಯೋಗೀಶ್‌ಭಟ್: ಸನ್ಮಾನ್ಯ ಅಧ್ಯಕ್ಷರೆ, ...

ಅಧ್ಯಕ್ಷರು : ಆಯಿತು, ಎಲ್ಲರಿಗೂ ಮಾತನಾಡುವುದಕ್ಕೆ ಅವಕಾಶವನ್ನು ಕೊಡುವುದಿಲ್ಲ. ಈಗ ಮುಂದಿನ ಪ್ರಶ್ನೆಗೆ ಹೋಗೋಣ.

ಶ್ರೀ ಕ್ಯಾತ್ಸಂದ್ರ ಎನ್.ರಾಜಣ್ಣ : ತುಮಕೂರು ಜಿಲ್ಲೆಯಲ್ಲಿ ಮಲೇರಿಯಾ ರೋಗ ಇದೆ ಎಂಬುದರ ಬಗ್ಗೆ ನಿಮ್ಮ ಗಮನಕ್ಕೆ ಬಂದಿದೆಯಾ ಎಂದು ನಾನು ಕೇಳುತ್ತಿದ್ದೇನೆ. ನಿಮ್ಮ ಅಧಿಕಾರಿಗಳು ನಿಮ್ಮನ್ನು ಎಷ್ಟು ಕತ್ತಲಲ್ಲಿ ಇಡುತ್ತಾರೆ ಎಂಬುದಕ್ಕೆ ಹೇಳುತ್ತಿದ್ದೇನೆ. ಎಷ್ಟೆಷ್ಟು ಕೇಸ್‌ಗಳು ರಿಪೋರ್ಟ್ ಆಗಿದೆ ಎಂಬುದರ ಬಗ್ಗೆ ನಿಮ್ಮ ಇಲಾಖೆಯವರು ಕೊಟ್ಟಿರುವ ದಾಖಲೆಗಳು ಇದೆ. ಇದರ ಬಗ್ಗೆ ಮತ್ತೆ ಪತ್ರದ ಮುಖೇನ ನಾವು ಕ್ರಮವನ್ನು ತೆಗೆದುಕೊಳ್ಳುತ್ತೇವೆಂದು ತಿಳಿಸಿದ್ದಾರೆ. ನೀವು ಹೇಳತಕ್ಕಂಥದ್ದು ಆ ಜಿಲ್ಲೆಯಲ್ಲಿ ಮಲೇರಿಯಾ ರೋಗ ಇದೆ ಎಂಬುದರ ಬಗ್ಗೆ ನಿಮ್ಮ ಉತ್ತರದಲ್ಲಿ ಕಾಣುತ್ತಿಲ್ಲ. ಅದಕ್ಕೋಸ್ಕರ ಇದು ನಿಮ್ಮ ಗಮನಕ್ಕೆ ಬಂದಿದೆಯಾ ಎಂದು ನಾನು ಕೇಳುತ್ತಿದ್ದೇನೆ.

ಶ್ರೀ ಎನ್.ಚಲುವರಾಯಸ್ವಾಮಿ : ಇದರ ಬಗ್ಗೆ ತಪ್ಪು ಮಾಹಿತಿಯನ್ನು ಕೊಟ್ಟಿದ್ದರೆ ಅವರ ಮೇಲೆ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಮಲೇರಿಯಾ ಕಾಯಿಲೆ ಇದ್ದರೆ ಅದರ ಬಗ್ಗೆ ಹೆಚ್ಚಿನ ಗಮನವನ್ನು ಹರಿಸುತ್ತೇವೆಂದು ತಿಳಿಸುತ್ತೇನೆ.

ಅಧ್ಯಕ್ಷರು : ಮಾನ್ಯ ಕಳಕಪ್ಪ ಗುರುಶಾಂತಪ್ಪ ಬಂಡಿಯವರು ಪ್ರಶ್ನೆಯನ್ನು ಕೇಳಿ.

ಶ್ರೀ ಎನ್.ಯೋಗೀಶ್‌ಭಟ್ : ಮಾನ್ಯ ಅಧ್ಯಕ್ಷರೆ, ...

ಅಧ್ಯಕ್ಷರು : ಯೋಗೀಶ್‌ಭಟ್‌ರವರೇ ತಾವು ಕುಳಿತುಕೊಳ್ಳಿ. ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಮಾನ್ಯ ಕಳಕಪ್ಪ ಗುರುಶಾಂತಪ್ಪ ಬಂಡಿಯವರೇ, ಪ್ರಶ್ನೆಯನ್ನು ಕೇಳಿ.

ಶ್ರೀ ಕಳಕಪ್ಪಾ ಗುರುಶಾಂತಪ್ಪ ಬಂಡಿ : ಸನ್ಮಾನ್ಯ ಅಧ್ಯಕ್ಷರೆ, ನಾನು 1005ನೇ ಪ್ರಶ್ನೆಯನ್ನು ಸನ್ಮಾನ್ಯ ವಸತಿ ಸಚಿವರಲ್ಲಿ ಕೇಳುತ್ತಿದ್ದೇನೆ.

ಶ್ರೀ ಎನ್.ಯೋಗೀಶ್‌ಭಟ್ : ಸನ್ಮಾನ್ಯ ಅಧ್ಯಕ್ಷರೆ, ನನಗೆ ಮಾತನಾಡಲು ಒಂದು ನಿಮಿಷ ಅವಕಾಶವನ್ನು ಮಾಡಿಕೊಡಬೇಕು.

ಅಧ್ಯಕ್ಷರು : ಮಾನ್ಯ ಯೋಗೀಶ್‌ಭಟ್‌ರವರೇ, ನಿಮ್ಮಂತಹ ಹಿರಿಯ ಸದಸ್ಯರು ಈ ರೀತಿಯಾಗಿ ಮಾಡಿದರೆ ಹೇಗೆ? ಎಲ್ಲರೂ ಕೇಳುವಂತಹ ಪ್ರಶ್ನೆಗಳಿಗೆ ಉತ್ತರ ಸಿಗಬೇಕೋ ಬೇಡವೋ? ಎಲ್ಲಾ ಕಡೆಗಳಲ್ಲೂ ಮಲೇರಿಯಾ ರೋಗವಿದೆ.

ಶ್ರೀ ಎನ್.ಯೋಗೀಶ್‌ಭಟ್ : ಇಲ್ಲಾ ಅಧ್ಯಕ್ಷರೆ, ಕೇಂದ್ರ ಸರ್ಕಾರದ ಯೋಜನೆಗಳನ್ನು ಅನುಷ್ಠಾನಕ್ಕೆ ತರುತ್ತಾ ಇಲ್ಲಾ.

ಅಧ್ಯಕ್ಷರು : ನೋ ನೋ, ಎಲ್ಲಾ ಕಡೆಗಳಲ್ಲೂ ಮಲೇರಿಯಾ ಇದೆ.

ಶಾಸಕರ ಕೈ ತಪ್ಪಿದ ಅಧಿಕಾರ: ಪಂಚಾಯತ್ ಮೂಲಕ ಆಶ್ರಯ ಯೋಜನೆ ಅನುಷ್ಠಾನ.

104(1005) ಶ್ರೀ ಕಳಕಪ್ಪ ಗುರುಶಾಂತಪ್ಪ ಬಂಡಿ (ರೋಣ) ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಆಶ್ರಯ ಯೋಜನೆಯಡಿ ಮನೆ ಹಂಚಿಕೆ ಕೆಲಸವನ್ನು ಅನುಷ್ಠಾನಗೊಳಿಸಲು ಯಾರಿಗೆ ಅಧಿಕಾರ ನೀಡಲಾಗಿದೆ;

ಆ. ಆಶ್ರಯ ಸಮಿತಿಯ ಕಾರ್ಯವ್ಯಾಪ್ತಿಗಳೇನು;

ಇ. ಇದರಲ್ಲಿ ಶಾಸಕರ ಪಾತ್ರವೇನು;

ಈ. ಅಧಿಕಾರ ವಿಕೇಂದ್ರೀಕರಣದ ಹೆಸರಿನಲ್ಲಿ ಶಾಸಕರ ಅಧಿಕಾರವನ್ನು ಮೊಟಕುಗೊಳಿಸುತ್ತಿರಲು ಕಾರಣಗಳೇನು;

ಉ. ಈ ಯೋಜನೆಯ ಮನೆ ಹಂಚಿಕೆ ಅನುಷ್ಠಾನವನ್ನು ಗ್ರಾಮ ಪಂಚಾಯ್ತಿ ವ್ಯಾಪ್ತಿಗೆ ವಹಿಸಲು ನಿರ್ಧರಿಸಲಾಗಿದೆಯೇ;

ಋ. ಈ ನಿಟ್ಟಿನಲ್ಲಿ ಆಶ್ರಯ ಸಮಿತಿಗಳನ್ನು ಪುನರಚಿಸುವ ಕಾರ್ಯಕ್ಕೆ ಕೂಡಲೇ ಚಾಲನೆ ನೀಡಲಾಗುವುದೇ; ಯಾವಾಗ (ವಿವರ ನೀಡುವುದು)?

ಶ್ರೀ ಅಂಜನಮೂರ್ತಿ (ವಸತಿ ಸಚಿವರು)

ಅ. ಕರ್ನಾಟಕ ಪಂಚಾಯತ್‌ರಾಜ್ ಕಾಯ್ದೆಗೆ ಸರ್ಕಾರವು ಅಧಿಸೂಚನೆ ಸಂಖ್ಯೆ SAMVYSHAE 33 SHASANA 2002 ದಿನಾಂಕ 22.09.2003 ರಲ್ಲಿ ತಿದ್ದುಪಡಿಯನ್ನು ಮಾಡಿದ್ದು ಸದರಿ ತಿದ್ದುಪಡಿಯ ಪ್ರಕಾರ ಆಶ್ರಯ ಮತ್ತು ಅಂಬೇಡ್ಕರ್ ವಸತಿ ಯೋಜನೆಗಳಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡುವ ಕಾರ್ಯವು ಗ್ರಾಮ ಪಂಚಾಯಿತಿಗಳ ಕಾರ್ಯ ವ್ಯಾಪ್ತಿಯಲ್ಲಿ ಬರುತ್ತದೆ. ಸದರಿ ಕಾಯ್ದೆಯಡಿಯಲ್ಲಿ ನಿಯಮಾನುಸಾರ ಆಯ್ಕೆ ಮಾಡಿದ ಪಟ್ಟಿಯು ಅಂತಿಮ ಪಟ್ಟಿಯಾಗಿರುತ್ತದೆ. ಇದಕ್ಕನುಗುಣವಾಗಿ, 2004–05ನೇ ಸಾಲಿನಿಂದ ಆಶ್ರಯ ಫಲಾನುಭವಿಗಳ ಆಯ್ಕೆ, ಕಾರ್ಯಕ್ರಮ ಅನುಷ್ಠಾನಗೊಳಿಸುವ ಜವಾಬ್ದಾರಿ ಮತ್ತು ಸಾಲವಸೂಲಾತಿ ಇತ್ಯಾದಿ ಜವಾಬ್ದಾರಿಯನ್ನು ಸರ್ಕಾರವು ತನ್ನ ಸುತ್ತೋಲೆ ಸಂಖ್ಯೆ ವಇ 74 ಹೆಚ್‌ಎವೈ 2004 ದಿನಾಂಕ 20.11.2004 ಅನ್ವಯ ಗ್ರಾಮಪಂಚಾಯತಿಗಳಿಗೆ ವಹಿಸಿದೆ.

ಆ. 2004–05 ರಿಂದ ಆಶ್ರಯ ಸಮಿತಿಗಳನ್ನು ರಚಿಸುವ ಪ್ರಶ್ನೆ ಉದ್ಭವಿಸುವುದಿಲ್ಲವಾದ್ದರಿಂದ, ಸದರಿ ಸಮಿತಿಯ ಕಾರ್ಯವ್ಯಾಪ್ತಿಯ ಪ್ರಶ್ನೆಯೂ ಉದ್ಭವಿಸುವುದಿಲ್ಲ.

ಇ. ಆಶ್ರಯ ಸಮಿತಿಯನ್ನು 2004–05 ರಿಂದ ರಚಿಸದಿರುವುದರಿಂದ, ಅದರಲ್ಲಿ ಶಾಸಕರ ಪಾತ್ರದ ಪ್ರಶ್ನೆ ಉದ್ಭವಿಸುವುದಿಲ್ಲ.

ಈ. ಸರ್ಕಾರದ ನೀತಿ ಹಾಗೂ ಕಾನೂನಿನಂತೆ ಅಧಿಕಾರ ವಿಕೇಂದ್ರೀಕರಣ ಮಾತ್ರ ಮಾಡಲಾಗಿದೆ. ಇದರಲ್ಲಿ ಶಾಸಕರ ಅಧಿಕಾರ ಮೊಟಕುಗೊಳಿಸುವ ಉದ್ದೇಶ ಸರ್ಕಾರಕ್ಕೆ ಇರುವುದಿಲ್ಲ.

ಉ. ಹೌದು.

ಋ. ಇಲ್ಲ.

ಶ್ರೀ ಕಣಕಪ್ಪ ಗುರುಶಾಂತಪ್ಪ ಬಂಡಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಆದರೆ ಇವತ್ತಿನ ದಿವಸ ಸರ್ಕಾರ ಎಲ್ಲಾ ಶಾಸಕರ ಅಧಿಕಾರವನ್ನು ಮೊಟಕುಗೊಳಿಸಿ ಗ್ರಾಮಪಂಚಾಯಿತಿಗೆ ಕೊಡುವುದಾದರೆ ಇವತ್ತು ಶಾಸಕರು ಈ ರಾಜ್ಯದಲ್ಲಿ ಏತಕ್ಕಾಗಿ ಬೇಕು, ಇವತ್ತು ಕರ್ನಾಟಕ ರಾಜ್ಯದ ಜನತೆಗೆ...

ಅಧ್ಯಕ್ಷರು : ಮಾನ್ಯ ಬಂಡಿಯವರೇ, ತಾವು ಪ್ರಶ್ನೆಯನ್ನು ಕೇಳಿ. ಏಕೆ ಬೇಕು ಎಂದು ಕೇಳಿದರೆ ಹೇಗೆ?

ಶ್ರೀ.ಕಳಕಪ್ಪ ಗುರುಶಾಂತಪ್ಪ ಬಂಡಿ : ಇವತ್ತು ಬರೀ ಶಾಸಕರು ಒಂದು ಶಾಸನವನ್ನು ಮಾಡುವುದಾದರೆ ಇವತ್ತು ಮಾನ್ಯ ಸಚಿವರು ಹಿಂದೆ ಇದ್ದಂತಹ ಆಶ್ರಯ ಸಮಿತಿಗಳಿಗೆ ಮಾನ್ಯ ಶಾಸಕರನ್ನೇ ಅಧ್ಯಕ್ಷರನ್ನಾಗಿ ಮಾಡಲಾಗಿತ್ತು ಅದೇ ರೀತಿ ಈಗಲೂ ಮಾಡಬೇಕೆಂದು ನಾನು ಇವತ್ತು ಕೇಳುತ್ತಿದ್ದೇನೆ.

ಶ್ರೀ ಅಂಜನಮೂರ್ತಿ: ಮಾನ್ಯ ಸದಸ್ಯರು ಕೇಳಿರುವಂತಹ ಸವಿಸ್ತಾರವಾದ ಉತ್ತರವನ್ನು ಸರ್ಕಾರ ನೀಡಿದೆ. 2003–04ನೇ ಸಾಲಿನ 11ನೇ ತಿಂಗಳವರೆವಿಗೂ ಈ ಆಶ್ರಯ ಯೋಜನೆಯಡಿಯಲ್ಲಿ ಖಾಲಿ ನಿವೇಶನಗಳನ್ನು ಅಥವಾ ಮನೆ ಕಟ್ಟುವ ಗ್ರಾಂಟ್‌ಗಳನ್ನು ಆಯಾ ತಾಲ್ಲೂಕಿನ ಶಾಸಕರ ಅಧ್ಯಕ್ಷತೆಯಲ್ಲಿ ವಿತರಣೆಯಾಗುತ್ತಿತ್ತು. ಕರ್ನಾಟಕ ಪಂಚಾಯತ್‌ರಾಜ್ ಕಾಯಿದೆಗೆ ಸರ್ಕಾರ ಒಂದು ಅಧಿಸೂಚನೆ 33:2002 ದಿನಾಂಕ 22–9–2003ರಲ್ಲಿ ಹೊರಡಿಸಿತು. ಅದಕ್ಕೆ ಅನುಗುಣವಾಗಿ ಇದೇ ಸದನದಲ್ಲಿ ದಿನಾಂಕ 20–11–2004ರಂದು ಸಂಖ್ಯೆ : ವಾಇ: ಶಾಸಕರಿಗೆ ಇದ್ದ ಆಶ್ರಯ ಸಮಿತಿಯಲ್ಲಿದ್ದಂತಹ 74 ರಲ್ಲಿ : ಪೂರ್ಣ ಅಧಿಕಾರವನ್ನು ಗ್ರಾಮಪಂಚಾಯಿತಿಗೆ ವಹಿಸಿತು. ಇದರ ಬಗ್ಗೆ ಮಾನ್ಯ ಶಾಸಕರು ಕೇಳಿದರು ಶಾಸಕರಿಗೆ ಇದ್ದಂತಹ ಅಧಿಕಾರವನ್ನು ಮೊಟಕು ಗೊಳಿಸಿದ್ದೀರೆಂದು ಹೇಳಿದರು. ಇದರಲ್ಲಿ ಮೊಟಕುಗೊಳಿಸುವಂತಹ ಪ್ರಶ್ನೆ ಬರುವುದಿಲ್ಲ. ಇದು ಸರ್ಕಾರದ ನೀತಿ ಹಾಗೂ ಕಾನೂನಿನಂತೆ ಅಧಿಕಾರ ವಿಕೇಂದ್ರೀಕರಣವನ್ನು ಮಾತ್ರ ಮಾಡಲಾಗಿದೆ. ಶಾಸಕರಿಗೆ ಇದರಲ್ಲಿ ಅಧಿಕಾರವನ್ನು ಮೊಟಕು ಗೊಳಿಸುವಂತಹ ಪ್ರಶ್ನೆಯೇ ಇಲ್ಲವೆಂದು ನನ್ನ ಭಾವನೆ.

ಮಾನ್ಯ ಸದಸ್ಯರು : ಇದರಲ್ಲಿ ಶಾಸಕರ ಪಾತ್ರವೇನೆಂದು ಹೇಳಲಿ.

ಅಧ್ಯಕ್ಷರು : ದಯಮಾಡಿ ಮಾನ್ಯ ಬಂಡಿಯವರು ಪ್ರಶ್ನೆಯನ್ನು ಕೇಳಲಿ. ಅವರಿಗೆ ಮಾತ್ರ ಪ್ರಶ್ನೆಯನ್ನು ಕೇಳುವ ಹಕ್ಕು ಇರುವುದು. ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಬಂಡಿಯವರೇ, ತಾವು ಏನಾದರೂ ಕೇಳುವುದಿದ್ದರೆ ಅದನ್ನು ಕೇಳಿ. ಈ ಭಾಷಣವನ್ನು ಮಾನ್ಯ ಸದಸ್ಯರಿಂದ ಪರಿಷ್ಕರಿಸಲ್ಪಿಟ್ಟಿದೆ.

ಶ್ರೀ ಕಳಕಪ್ಪ ಗುರುಶಾಂತಪ್ಪ ಬಂಡಿ : ಇವತ್ತು ಕುಡಿಯುವ ನೀರಿನ ಯೋಜನೆಗೆ...

ಅಧ್ಯಕ್ಷರು : ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಮಾನ್ಯ ಬಂಡಿಯವರೇ, ತಾವು ಏನಾದರೂ ಕೇಳುವುದಿದ್ದರೆ ಕೇಳಿ.

ಶ್ರೀ ಕಳಕಪ್ಪ ಗುರುಶಾಂತಪ್ಪ ಬಂಡಿ : ಕುಡಿಯುವ ನೀರಿನ ಯೋಜನೆಯ ಬಗ್ಗೆ ಶಾಸಕರ ನೇತೃತ್ವದಲ್ಲಿ ಅಧ್ಯಕ್ಷ ಸ್ಥಾನವನ್ನು ಮಾಡಿದ್ದೀರಿ ಅದೇ ರೀತಿಯಾಗಿ ಕೂಡ ಆಶ್ರಯ ಸಮಿತಿಗೆ ಶಾಸಕರನ್ನು ಅಧ್ಯಕ್ಷರನ್ನಾಗಿ ಮಾಡಬೇಕೆಂದು ನಾನು ಇವತ್ತು ಕೇಳುತ್ತಿದ್ದೇನೆ.

ಅಧ್ಯಕ್ಷರು : ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಇನ್ನು 10 ನಿಮಿಷಗಳು ಇದೆ. ಅಷ್ಟರಲ್ಲಿ ನಾನು 4 ಪ್ರಶ್ನೆಗಳನ್ನು ಮುಗಿಸಬೇಕು. ತಾವೆಲ್ಲರೂ ದಯಮಾಡಿ ಸಹಕರಿಸಬೇಕು.

(ಗೊಂದಲ)

ಅಧ್ಯಕ್ಷರು : ಈಗ ರಾಜ್ಯಪಾಲರ ಭಾಷಣದ ಮೇಲೆ ವಂದನಾ ನಿರ್ಣಯದ ಮೇಲೆ ಚರ್ಚೆ ನಡೆಯುತ್ತಿದೆ. ತಾವು ಅದರಲ್ಲಿ ಭಾಗವಹಿಸಿ, ಈ ಪ್ರಶ್ನೆಯನ್ನು ಪ್ರಸ್ತಾಪ ಮಾಡಬಹುದು. ಅದಕ್ಕೆ ಸರ್ಕಾರ ಅದರಲ್ಲೂ ಮಾನ್ಯ ಮುಖ್ಯಮಂತ್ರಿಯವರು ಉತ್ತರವನ್ನು ಕೊಡುವವರು ಇದ್ದಾರೆ. ಆದುದರಿಂದ ದಯಮಾಡಿ ಕಲಾಪವನ್ನು ನಡೆಸುವುದಕ್ಕೆ ಅವಕಾಶ ಮಾಡಿಕೊಡಿ. ಈಗ ಮಾನ್ಯ ರೇಣುಕಾಚಾರ್ಯರವರು ಪ್ರಶ್ನೆಯನ್ನು ಕೇಳಲಿ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಆಶ್ರಯ ಸಮಿತಿಗೆ ಶಾಸಕರನ್ನು ಅಧ್ಯಕ್ಷರನ್ನಾಗಿ ಮಾಡಿ.

ಅಧ್ಯಕ್ಷರು : ಮಾನ್ಯ ಎಂ.ಪಿ.ರೇಣುಕಾಚಾರ್ಯರವರು ಗೈರು ಹಾಜರಿದ್ದಾರೆ... ಮಾನ್ಯ ಸಿ.ಎಂ.ಉದಾಸಿಯವರು, ದಯಮಾಡಿ ಎಲ್ಲರೂ ಕುಳಿತುಕೊಳ್ಳಬೇಕು.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ಆಶ್ರಯ ಸಮಿತಿಗೆ ಶಾಸಕರನ್ನು ಅಧ್ಯಕ್ಷರನ್ನಾಗಿ ಮಾಡಬೇಕು.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಆಶ್ರಯ ಸಮಿತಿಗೆ ಶಾಸಕರು ಅಧ್ಯಕ್ಷರಾಗಬೇಕು, ಅದನ್ನು ಮಾನ್ಯ ಮಂತ್ರಿಯವರು ಹೇಳಬೇಕು. ನಾವು ಧರಣಿ ಮಾಡುತ್ತೇವೆ. (ಈ ಹಂತದಲ್ಲಿ ಬಿ.ಜೆ.ಪಿ.ಸದಸ್ಯರು ಹಾಗೂ ಶ್ರೀ ವಾಟಾಳ್‌ನಾಗರಾಜ್‌ರವರು ಸದನದ ಬಾವಿಗೆ ಬಂದು ಧರಣಿ ನಡೆಸಿದರು)

ಅಧ್ಯಕ್ಷರು : ಸಭೆಯನ್ನೂ ನಾಳೆ ಬೆಳಿಗ್ಗೆ 9.00 ಗಂಟೆಯವರೆಗೆ ಮುಂದೂಡಲಾಗಿದೆ. (ಸದನವು ಸಂಜೆ 5.51 ಗಂಟೆಗೆ ಮುಂದೂಡಲ್ಪಟ್ಟು ಪುನಃ ದಿನಾಂಕ 3ನೇ ಫೆಬ್ರವರಿ 2005ರಂದು ಬೆಳಿಗ್ಗೆ 9.00 ಗಂಟೆಗೆ ಸೇರಲು ನಿಶ್ಚಯಿಸಿತು.)